Publication : Samyuktha Karnataka
Date: June 20, 2014
Page No: 3
Edition: All

SARA Media Net
Simply communicate...

# ಮಚ್ಚು ಲಾಂಗ್ ನನಗಾಗಲ್ಲ..



ಕನ್ನಡ ಚಿತ್ರರಂಗದಲ್ಲಿ ಮಚ್ಚು ಲಾಂಗುಗಳ ವಿಜೃಂಭಣೆ ಸರಿಯಲ್ಲ; ನಿಜ ಹೇಳಬೇಕೆಂದರೆ ಮಚ್ಚು ಲಾಂಗು ಹಾಗೂ ರಕ್ತಪಾತ ಇವುಗಳನ್ನು ನೋಡಿದರೆ ನನಗೆ ಆಗುವುದಿಲ್ಲ..

ಸುಮಾರು ಎರಡು ವರ್ಷಗಳಾದವು ನೀವೇಕೆ ಚಿತ್ರರಂಗದಿಂದ ದೂರವಿದ್ದೀರಿ.. ಎಂಬ ಪ್ರಶ್ನೆ ಎದುರಾದಾಗ ನಟಿ ಭಾವನಾ ಉದ್ಘರಿಸಿದ್ದು ಹೀಗೆ..

ಕೆಲವೊಮ್ಮೆ ನಾನು ಚಿತ್ರರಂಗಕ್ಕೆ ಬೇಕಾದ ಭಾಷೆ, ಚಾಲಾಕಿತನ ಅಳವಡಿಸಿಕೊಂಡಿಲ್ಲ ಎನಿಸುತ್ತದೆ. ಆದರೆ ಕೆಲವೊಮ್ಮೆ ನನ್ನ ಮನಸ್ಸಿಗೆ ವಿರುದ್ಧವಾಗಿ ಹೋಗಬಾರದು ಎನಿಸುತ್ತದೆ. ಆದ್ದರಿಂದಲೇ ನಾನು ಪ್ರಯತ್ನಗಳಿಂದ ಹಿಂದೆ ಸರಿದೆ. ಅಲ್ಲದೆ ಚಿತ್ರೋತ್ಸವ ಮೊದಲಾದ ಕಾರ್ಯಕ್ರಮಗಳಲ್ಲಿ ಸಕ್ರಿಯಳಾಗಿದ್ದೆ. ಹಾಗಾಗಿ ಚಿತ್ರರಂಗದಿಂದ ದೂರವಿರುತ್ತೇನೆ ಎಂಬುದು ಸರಿಯಲ್ಲ.

ನಾನು ಆಧ್ಯಾತ್ಮದ ಕಡೆ ವಾಲಿದ್ದೇನೆ ಎಂದು ಬಹಳ ಜನರು ಭಾವಿಸಿದ್ದಾರೆ. ಆದರೆ ನನ್ನ ಗುರುಗಳು ಆ ಕಡೆ ತಲೆ ಇಟ್ಟೂ ಮಲಗಬೇಡ ಎಂದು ಹೇಳಿದ್ದರು. ಈಗ 'ನಿರುತ್ತರ'ದಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುವುದರ ಮೂಲಕ ನಿರ್ಮಾಣದಲ್ಲೂ ಸಹಾಯ ಮಾಡುತ್ತಿದ್ದೇನೆ. ಏಕೆಂದರೆ ಇದರಲ್ಲಿ ನನ್ನ ತಮ್ಮ ಅರವಿಂದ್ ರಾಮಣ್ಣ ನಿರ್ಮಾಪಕ. ನಮ್ಮ ಸಂಸ್ಥೆ 'ಹೋಮ್ ಟೌನ್ ಪ್ರೊಡಕ್ಷನ್' ಈಗಾಗಲೇ ಭಾರತ ಮಟ್ಟದಲ್ಲಿ ಗುರುತಿಸಿಕೊಂಡಿದೆ.

ಹಣವನ್ನು ನೋಡಿದರೆ ನನಗೆ ಭಯವಾಗುತ್ತದೆ. ಯಾರಾದರೂ ಹಣ ಗುಡ್ಡೆ ಹಾಕಿ ಎಣಿಸು ಎಂದರೆ ಕೈ ಕಾಲುಗಳು ನಡುಗುತ್ತವೆ. ಆದ್ದರಿಂದಲೇ ನಾನು ಯಾವಾಗಲೂ ನನ್ನ ಪರ್ಸ್‌ನಲ್ಲಿ ಕೇವಲ ನೂರು ರೂ.ಗಳನ್ನು ಮಾತ್ರ ಇಟ್ಟುಕೊಂಡಿರುತ್ತೇನೆ. ಇದೇ ಕಾರಣದಿಂದ ಆಟೋ ಚಾಲಕರು ಹಾಗೂ ಎಳನೀರು ಮಾರುವವರ ಬಳಿಯೂ ಸಾಲ ಮಾಡಿದ್ದಿದೆ.

ನಾನು ನಟಿ ಎಂಬ ಕಾರಣದಿಂದ ಅವರೂ ಫ್ರಿಯಾಗಿ ಕೊಡುವುದು ಸಾಧ್ಯವಿಲ್ಲ. ಒಮ್ಮೆ ಎಳನೀರು ಕುಡಿಯಲು ಹೋದಾಗ, ಹೊಟ್ಟೆ ಹಸಿವೆಂದು ಎರಡು ಎಳನೀರು ಕುಡಿದ ನಂತರ ಮೂರನೇಯದನ್ನು ನನಗೆ ಫ್ರೀಯಾಗಿ ಕೊಟ್ಟರು.

ಈ ರೀತಿಯ ಅನುಭವಗಳು ನಾನು ಸರಳವಾಗಿರುವುದಕ್ಕೆ ಸಹಾಯ ಮಾಡಿವೆ. ಆದರೆ ನನ್ನ ನ್ಯೂನ್ಯತೆ ಏನು ಎಂಬುದನ್ನು ಪರಿಚಯಿಸಿವೆ.

ರಾಜಕೀಯವಾಗಿ ನನಗೆ ಬಹಳವೇ ಪ್ರಾಮುಖ್ಯತೆ ಸಿಕ್ಕದೆ. ನನ್ನ ಪಕ್ಷ ನನ್ನನ್ನು ಚೆನ್ನಾಗಿ ನಡೆಸಿಕೊಂಡಿದೆ.

## ಎಂಎಲ್‌ಸಿ ಆಗದಿರುವುದಕ್ಕೆ ಬೇಸರವಿಲ್ಲ..

ಎಲ್ಲೋ ಒಂದು ಕಡೆ ನನ್ನ ಹೆಸರು ವಿಧಾನಪರಿಷತ್ ಸದಸ್ಯತ್ವಕ್ಕೆ ಕೇಳಿಬಂದಿತ್ತು ಎಂಬುದು ನಿಜ. ಅದು ಕೈ ತಪ್ಪಿಹೋಯಿತು ಎಂದು ಯಾರು ಹೇಳುತ್ತಿದ್ದಾರೋ ಗೊತ್ತಿಲ್ಲ. ಆದರೆ ನಾನು ಮಾಡಬೇಕಾಗಿರುವ ಕೆಲಸ ಬಹಳವೇ ಇದೆ. ಜೊತೆಗೆ ನನಗಿಂತ ದೊಡ್ಡವರು ಬಹಳವೇ ಇದ್ದಾರೆ. ಆದ್ಯತೆಯ ಮೇಲೆಯೇ ಎಲ್ಲವೂ ಆಗುತ್ತದೆ ಎನ್ನುವಾಗ ಏಕೆ ತಲೆ ಕೆಡಿಸಿಕೊಳ್ಳಬೇಕು ಎಂದು ನಕ್ಕರು ಭಾವನಾ.

ಏನೇ ಸ್ಟಾರ್ ವ್ಯಾಲ್ಯೂ ಇದ್ದರೂ ವಾಸ್ತವ ಬೇರೆ ಇರುತ್ತದೆ. ಹಾಗಾಗಿ ಈ ಅಂತರದಲ್ಲಿ ಆತ್ಮವಿಮರ್ಶೆ ಮಾಡಿಕೊಳ್ಳಬೇಕು. ನನ್ನನ್ನು ಎಲ್ಲರೂ ಗುರುತಿಸುತ್ತಿದ್ದಾರೆ. ಕೆಲಸ ಮಾಡುವ ಉತ್ಸಾಹ ಹುಮ್ಮಸ್ಸು ಎರಡೂ ಹೆಚ್ಚಾಗಿದೆ. ಕೊಟ್ಟ ಜವಾಬ್ದಾರಿಯನ್ನು ನಿರ್ವಹಿಸುತ್ತೇನೆ ಎಂದರು.

# 70, Samruddhi, 1st Main, 2nd Block, Ayyappanagar, K. R. Puram, Bangalore – 560 036
Telefax : 080 25619525 Mobile : 094482 21565, 094489 02288
E-mail : saramedianet@gmail.com, amrithjogi@gmail.com
**www.saramedianet.com**